**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಫ್ರಾಸಾ- 13
ಚಾಸಾ- 25

ಸಾಕ್ಷಿದಾರರ ಹೆಸರು : ರಮೇಶ್ ಎ.ಎನ್

ತಂದೆಯ ಹೆಸರು : ಲೇಟ್ ನಾರಾಯಣ

ವಯಸ್ಸು : 51 ವರ್ಷ

ವೃತ್ತಿ : ಹೆಚ್ ಸಿ-201, CEN ಪೊಲೀಸ್ ಠಾಣೆ, ಮಡಿಕೇರಿ

ವಾಸ : ಮಡಿಕೇರಿ.

ಸಾಕ್ಷಿಯನ್ನು ದಿನಾಂಕ **12-07-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

ನಾನು 2016 ರಿಂದ 2023 ರವರೆಗೆ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯಪೇದೆಯಾಗಿ ಕೆಲಸ ಮಾಡಿದ್ದೆ.

ದಿನಾಂಕ 21-10-2019 ರಂದು ಚಾಸಾ-29 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಯಾಳು ಡಿ.ಸುಜೀತ್ ರವರ ಫ್ರಾಸಾ-1 ರವರ ಬಟ್ಟೆಗಳನ್ನು ಮತ್ತು ಅವರ ದೇಹದಲ್ಲಿ ಇದ್ದ pellets ಗಳನ್ನು ತಂದು ಮಡಿಕೇರಿ ಜಿಲ್ಲಾ ಆಸ್ಪತ್ರೆಯಿಂದ ಹಾಜರುಪಡಿಸಿದ ಮೇರೆಗೆ ನಾನು ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ಕೊಟ್ಟು ಅವರು ನೀಡಿದ ಲಕೋಟೆ ಹಾಗೂ ಬಟ್ಟೆ ಗಳನ್ನು ಚಾಸಾ-29 ರವರ ತಂದು ಹಾಜರುಪಡಿಸಿರುತ್ತೇನೆ. ಸದರಿ ಬಟ್ಟೆಗಳ ವಿವರ ಒಂದು ಜಾಕೇಟ್, ಒಂದು ಟಿ-ಶರ್ಟು, ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟು, pellets ಗಳು ಇರುವ ಒಂದು ಸಣ್ಣ ಪ್ಲಾಸ್ಟಿಕ್ ಬಾಕ್ಸ್ ಅವುಗಳನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಯಿಂದ ತಂದು ಚಾಸಾ-29 ರವರ ಎದುರು ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲು ಚಾಸಾ-29 ರವರು ಪಂಚರನ್ನು ಬರಹೇಳಿ ಪಂಚರ ಸಮಕ್ಷಮ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡರು. ಬಟ್ಟೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಪ್ಯಾಕ್

ಮಾಡಿ, ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿದರು. ಈಗ ನಾನು ನೋಡುತ್ತಿರುವ ಮಹಜರ್ ನಾನು ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಆಗಿದ್ದು, ಅದನ್ನು ನಿಪಿ- 6 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ- 6(ಬಿ) ಎಂದು ಗುರುತಿಸಲಾಯಿತು.

ನಿಪಿ-6 ರ ಸಂದರ್ಭದಲ್ಲಿ ಫೋಟೊಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-7 ಎಂದು ಈಗಾಗಲೇ ಗುರುತಿಸಲಾಗಿದೆ. ನನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾು ನೋಡುತ್ತಿರುವ ಒಂದು ಜಾಕೇಟ್, ಒಂದು ಟಿ-ಶರ್ಟು, ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟು, pellets ಗಳು ಇರುವ ಒಂದು ಸಣ್ಣ ಪ್ಲಾಸ್ಟಿಕ್ ಬಾಕ್ಸ್ ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ-2 ರಿಂದ 5 ಎಂದು ಗುರುತಿಸಲಾಯಿತು.

ದಿನಾಂಕ 24-10-2019 ರಂದು ಫ್ರಾಸಾ-1 ರವರ ಮೈಸೂರಿ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಅವರ ಶರೀರದಲ್ಲಿ ಉಳಿದ pellets ಗಳನ್ನುಹಾಜರುಪಡಿಸುವಂತೆ ನನಗೆ ಆದೇಶಿಸಿದ ಮೇರೆಗೆ ನಾನು ಸದರಿ ಮನವಿ ಪತ್ರವನ್ನು ತೆಗೆದುಕೊಂಡು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಗಾಯಾಳುವಿನ ಶರೀರದಲ್ಲಿ ಇದ್ದ pellets ಗಳನ್ನು ಪ್ಲಾಸ್ಟಿಕ್ ಬಾಕ್ಸಿಗೆ ಹಾಕಿ ಸಂಗ್ರಹಿಸಿಕೊಟ್ಟಿದ್ದನ್ನು ಮತ್ತು ಗಾಯದ swab ಒಂದು ಲಕೋಟೆಗೆ ಹಾಕಿ ನೀಡಿದ್ದು , ನಾನು ಅವುಗಳನ್ನು ಸ್ವೀಕರಿಸಿ ಚಾಸಾ-29 ರವರ ಎದುರು ಅದನ್ನು ಹಾಜರುಪಡಿಸಿರುತ್ತೇನೆ. ಆಸಂದರ್ಭದಲ್ಲಿ ಚಾಸಾ-29 ರವರು ಪಂಚರನ್ನು ಠಾಣೆಗೆ ಬರಹೇಳಿ ಚಾಸಾ-16 ಹಾಗು ಫ್ರಾಸಾ-12 ರವರ ಸಮಕ್ಷಮ ನಿಪಿ-16 ರ ಮಹಜರ್ ನ ಮುಖಾಂತರ ಅಮಾನತ್ತುಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ನಾನು ಆ ಸಂದರ್ಭದಲ್ಲಿ ತಯಾರಿಸಿದ ಮಹಜರ್ ಆಗಿದ್ದು, ಅದನ್ನು ನಿಪಿ-16 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಪ್ಲಾಸ್ಟಿಕ್ ಬಾಕ್ಸ್ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯಿಂದ ಸ್ವೀಕರಿಸಿದ ಬಾಕ್ಸ್ ಆಗಿದ್ದು ಅದನ್ನು ಈಗಾಗಲೇ ಮು.ಮಾ-7 ಎಂದು ಗುರುತಿಸಲಾಗಿದೆ.

**ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

ವೈದ್ಯಾಧಿಕಾರಿಗಳಿಂದ pellets ಗಳನ್ನು ಮತ್ತು ಬಟ್ಟೆಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ. ನಾನು ಅವುಗಳನ್ನು ಒಂದು

ಪ್ಲಾಸ್ಟಿಕ್ ಕವರ್ ಗೆ ಹಾಕಿ ತೆಗೆದುಕೊಂಡು ಬಂದಿದ್ದೆ. ಸದರಿ ಪ್ಲಾಸ್ಟಿಕ್ ಕವರ್ ನ್ಯಾಯಾಲಯದ ಎದುರು ಇಲ್ಲ. ಮಹಜರ್ ನ ಸಂದರ್ಭದಲ್ಲಿ ನಾನು ಪ್ಲಾಸ್ಟಿಕ್ ಕವರ್ ನಲ್ಲಿ ಮೇಲೆ ಹೇಳಿದ ಸ್ವತ್ತುಗಳನ್ನು ತಂದಿದ್ದೇನೆ ಎಂದು ತನಿಖಾಧಿಕಾರಿಗಳಿಗೆ ಹೇಳಿರಲಿಲ್ಲ. Pellets ಗಳುಳ್ಳ ಪ್ಲಾಸ್ಟಿಕ್ ಬಾಕ್ಸ್ ಅರಗಿನಿಂದ ಸೀಲಾಗಿತ್ತು. ಅರಗಿನಿಂದ ಸೀಲಾದ pellets ಗಳುಳ್ಳ ಪ್ಲಾಸ್ಟಿಕ್ ಬಾಕ್ಸ್ ನ್ನು ತೆರೆದು ಹೊಸದಾಗಿ ಪ್ಯಾಕ್ ಮಾಡಿದ್ದೇವೆ ಎಂದು ನಿಪಿ-6 ರಲ್ಲಿ ಉಲ್ಲೇಖಿಸಿಲ್ಲ. ಅರಗಿನಿಂದ ಸೀಲಾದ ಪ್ಲಾಸ್ಟಿಕ್ ಬಾಕ್ಸ್ ನ್ನು ತೆರೆಯುವ ಸಂದರ್ಭದಲ್ಲಿ ಫೋಟೊ ತೆಗೆದಿರಲಿಲ್ಲ. ಮೈಸೂರಿನಿಂದ ಸೋಮವಾರಪೇಟೆಗೆ 100 ಕಿಲೋ ಮೀಟರ್ ದೂರ ಇದೆ. ನನಗೆ ವೈದ್ಯಾಧಿಕಾರಿಗಳು ಬಟ್ಟೆಗಳನ್ನು ನೀಡುವ ಸಂದರ್ಭದಲ್ಲಿ ಅವುಗಳು ತೆರೆದಿದ್ದವು ಮತ್ತು ಪ್ಯಾಕ್ ಆಗಿರಲಿಲ್ಲ.

2 ನೇ ಬಾರಿ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯಿಂದ ಪ್ರಾಸಾ-1 ರವರ ದೇಹದಲ್ಲಿ ಇದ್ದ pellets ಗಳನ್ನು ತೆಗೆದುಕೊಂಡು ಬರುವ ಸಂದರ್ಭದಲ್ಲಿ ನಾನು ಮಹಜರ್ ಮಾಡಿರಲಿಲ್ಲ. ಮೊದಲೇ ಪ್ಲಾಸ್ಟಿಕ್ ಬಾಕ್ಸ್ 6 pellets, 2 ನೇ ಪ್ಲಾಸ್ಟಿಕ್ ಬಾಕ್ಸ್ ನಲ್ಲಿ 5 pellets ಗಳು ಇದ್ದವು. ವೈದ್ಯರು ಅವುಗಳನ್ನು ನೀಡುವಾಗ ಲೆಕ್ಕ ಮಾಡಿ ನೀಡಿದ್ದರು ಆ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿಲ್ಲ ಮತ್ತು ಆ ಬಗ್ಗೆ ಮಹಜರ್ ನಲ್ಲಿ ಬರೆದಿರುವುದಿಲ್ಲ. ನಾನು ಯಾವುದೇ ಕಾರಣಕ್ಕೂ ಆಸ್ಪತ್ರೆಗೆ ಹೋಗಿ ವೈದ್ಯರು ನೀಡಿದ ಸ್ವತ್ತುಗಳನ್ನು ತೆಗೆದುಕೊಂಡು ಬಂದು ತನಿಖಾಧಿಕಾರಿಗಳ ಎದುರು ಹಾಜರುಪಡಿಸಿಲ್ಲ ಮತ್ತು ನನ್ನ ಮೇಲಾಧಿಕಾರಿಗಳ ಕೋರಿಕೆಯ ಮೇರೆಗೆ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ಹಾಗೂ ನಿಪಿ-16 ರ ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ